ಇ) ಇಂಥ ಪ್ರಸಂಗಗಳಲ್ಲಿ ಪರಿಹಾರ ಹಣ ಮಂಜೂರು ಮಾಡುವಾಗ ಅಧಿಕಾರಿಗಳಿಂದ ಪಂಚನಾಮೆ ಮಾಡಿ ಪರಿಹಾರ ಮೊತ್ತವನ್ನು ನಿಗಧಿಪಡಿಸುವುದು ಅಲ್ಲದೆ ಆಯಾ ಸಾಲಿನಲ್ಲಿ ಅನುಧಾನ ನೀಡಿದ ಪರಿಮಿತಿಯಲ್ಲಿಯೇ ಪರಿಹಾರ ಧನ ಮಂಜೂರು ನೀಡಲಾಗುವುದು.

ಹಾಲಿನ ಡೈರಿಗಳ ನಷ್ಟ

1453 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಡೈರಿಗಳು ಕಳೆದ ಮೂರು ವರ್ಷಗಳಿಂದ ನಷ್ಟ ಅನುಭವಿಸುತ್ತಿವೆ?

ಆ) ಈ ರೀತಿ ಡೈರಿಗಳು ನಷ್ಟ ಅನುಭವಿಸುತ್ತಿರಲು ಕಾರಣಗಳೇನು?

ಇ) ಈ ಡೈರಿಗಳು ಲಾಭದಾಯಕವಾಗಿ ನಡೆಯುವಂತಾಗಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು):

ಅ) ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಮಂಗಳೂರು, ಶಿವಮೊಗ್ಗ, ಗುಲ್ಬರ್ಗಾ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ ಡೈರಿಗಳು ಮತ್ತು ಹಾಲು ಉತ್ಪನ್ನ ಘಟಕ ಮಂಡ್ಯ ಮತ್ತು ಧಾರವಾಡ.

ಆ)

1. ಡೈರಿಗಳಲ್ಲಿನ ಯಂತ್ರಗಳು ಹಳೆಯದಾಗಿದ್ದು ಅವುಗಳ ಸಾಮರ್ಥ್ಯ ತೃಪ್ತಿಕರವಾಗಿಲ್ಲದಿರುವುದರಿಂದ ಹಾಗೂ ಕಡಿಮೆ ಸಾಮರ್ಥ್ಯದಿಂದ,
2. ಇಂಧನ, ಫಿಲಂ, ವಿದ್ಯುತ್ ಮತ್ತು ಇತರೆ ಅಗತ್ಯ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಳ
3. ಹಾಲು ಶೇಖರಣೆ ಮತ್ತು ವಿತರಣೆ ಸಾಗಾಣಿಕೆ ವೆಚ್ಚದಲ್ಲಿ ಹೆಚ್ಚಳ,
4. ಹಾಲು ಮಹಾ ಮಂಡಳಿ ಮತ್ತು ಒಕ್ಕೂಟಗಳು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಸಾಲವಾಗಿ ಪಡೆದಿರುವ ಹಣದ ಮೇಲಿನ ಹೆಚ್ಚಿನ ಬಡ್ಡಿ.
5. ಸಿಬ್ಬಂದಿ ವೇತನದಲ್ಲಿ ಹೆಚ್ಚಳ ಇತ್ಯಾದಿ.

ಇ)

1) ಹಳೆಯ ಯಂತ್ರೋಪಕರಣಗಳ ಬದಲಾವಣೆ ಮತ್ತು ದುರಸ್ತಿ ಹಾಗೂ ಸಾಮರ್ಥ್ಯ ಹೆಚ್ಚಿಸುವುದು.
2) ಹಾಲು ಶೇಖರಣೆ ಮತ್ತು ಮಾರಾಟಗಳ ಪ್ರಮಾಣವನ್ನು ಹೆಚ್ಚಿಸಿ ಸಾಗಾಣಿಕೆ ವೆಚ್ಚ ಕಡಿಮೆ ಮಾಡುವುದು.
3) ಸಿಬ್ಬಂದಿ ಸೇವೆಯನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಅಗತ್ಯಕ್ಕೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳುವುದು.

ರಾಜ್ಯದಲ್ಲಿ ಅರಣ್ಯಗಳಿಗೆ ಬೆಂಕಿಯಿಡುತ್ತಿರುವುದನ್ನು ತಪ್ಪಿಸುವುದು

1608 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯಕ್ಕೆ ಬೆಂಕಿ ಇಡುತ್ತಿರುವ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅವುಗಳ ವಿವರಗಳನ್ನು ನೀಡುವುದು

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಬಂದಿದೆ.

ಆ)

1) ಮೈಸೂರು ಜಿಲ್ಲೆಯ ಮೂಳೆದೊಳೆ ಬೇಗೂರು ಮತ್ತು ಬಂಡೀಪುರ ಪ್ರದೇಶಗಳ ಕೆಲವು ಭಾಗಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಸುಮಾರು 1000 ಹೆಕ್ಟೇರು ಪ್ರದೇಶದಲ್ಲಿ ಅರಣ್ಯ ಪ್ರದೇಶಕ್ಕೆ ಬೆಂಕಿ ಹರಡಿರುತ್ತದೆ. ಈ ಬೆಂಕಿಯು ಬರೆ ನೆಲಮಟ್ಟದಲ್ಲಿ ಹರಡಿರುತ್ತದೆ.

2) ಚಾಮರಾಜನಗರ ವಿಭಾಗದಲ್ಲಿ 468 ಹೆಕ್ಟೇರು ಪ್ರದೇಶಕ್ಕೆ ನೆಲಮಟ್ಟದಲ್ಲಿ ಬೆಂಕಿ ಬಿದ್ದಿರುತ್ತದೆ.

3) ಮೈಸೂರು ವಿಭಾಗದಲ್ಲಿ 2ಹೆಕ್ಟೇರು ಪ್ರದೇಶಕ್ಕೆ ನೆಲಮಟ್ಟದ ಬೆಂಕಿ ಬಿದ್ದಿರುತ್ತದೆ.

4) ಕುಂದಾಪುರ ವಿಭಾಗದಲ್ಲಿ 3 ಹೆಕ್ಟೇರು ಅರಣ್ಯ ಪ್ರದೇಶಕ್ಕೆ ನೆಲಮಟ್ಟದ ಬೆಂಕಿ ಬಿದ್ದಿರುತ್ತದೆ.

5) ಬಳ್ಳಾರಿ ಜಿಲ್ಲೆಯ ಜೋಗಿಮಠ ಅರಣ್ಯ ಪ್ರದೇಶದಲ್ಲಿ ಅನಿರೀಕ್ಷಿತವಾಗಿ ನೆಲಮಟ್ಟದ ಬೆಂಕಿ ಬಿದ್ದಿರುತ್ತದೆ.

6) ಹಾಸನ ಜಿಲ್ಲೆಯ ಸಕಲೇಶಪುರ ಉಪ ವಿಭಾಗದಲ್ಲಿ ಸೀಡ್‌ಲಿಂಗ್ ಆರ್ಚರ್ಡ್‌ನ ಜಗಬೀರನ ಹಳ್ಳಿ ಪ್ರದೇಶದಲ್ಲಿ ಅಕಸ್ಮಿಕವಾಗಿ ನೆಲಮಟ್ಟದ ಬೆಂಕಿ ಬಿದ್ದಿರುತ್ತದೆ.

ಮೇಲೆ ನಮೂದಿಸಿರುವ ಅಕಸ್ಮಿಕ ಬೆಂಕಿ ಪ್ರಕರಣಗಳು ಎಲ್ಲವೂ ನೆಲಮಟ್ಟದಲ್ಲಿ ಹರಡಿರುವುದರಿಂದ ಹುಲ್ಲು ಮತ್ತು ಚಿಕ್ಕ ಗಿಡಗಳು ಮಾತ್ರ ಸುಟ್ಟಿರುತ್ತವೆ.

ಇ) ಅರಣ್ಯ ಪ್ರದೇಶಗಳಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಂಕಿಯನ್ನು ತಡೆಗಟ್ಟಲು ಈ ಕೆಳಕಂಡ ಮುಖ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಅರಣ್ಯಗಳ ಸುತ್ತ ಮತ್ತು ನೆಡುತೋಪುಗಳ ಸುತ್ತ ಸುಮಾರು 5 ಮೀಟರ್ ನಷ್ಟು ಹಗಲಕ್ಕೆ ಬೆಂಕಿ ರೇಖೆಯನ್ನು ಮಾಡಿ, ಬೆಂಕಿಯು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹರಡದಂತೆ ಮುಂಜಾಗ್ರತೆ ವಹಿಸಿರುತ್ತದೆ.

2) ಅಕಸ್ಮಿಕವಾಗಿ ಬೆಂಕಿ ಬಿದ್ದಾಗ ಅದನ್ನು ನಂದಿಸಲು ಮತ್ತು ಅರಣ್ಯ ಪ್ರದೇಶಕ್ಕೆ ಬೆಂಕಿ ಬಾರದಂತೆ ನೋಡಿಕೊಳ್ಳಲು ಬೇಸಿಗೆ ಕಾಲದಲ್ಲಿ ಅರಣ್ಯ ವೀಕ್ಷಕರನ್ನು ದಿನಗೂಲಿಯ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

3) ಅರಣ್ಯ ಪ್ರದೇಶದಲ್ಲಿ ಕಂಡಾಗ ಬೆಂಕಿಯನ್ನು ನಂದಿಸಲು ಬೇಕಾದ ಉಪಕರಣಗಳಾದ ವೈರ್ ರೇಕ್, ಮೆಕ್ ಲೈಟ್ ಟೂಲ್ ಇತ್ಯಾದಿ, ಸಲಕರಣೆಗಳನ್ನು ಒದಗಿಸಲಾಗಿದೆ.

4) ಬೆಟ್ಟಗುಡ್ಡಗಳಲ್ಲಿರುವ ಪ್ರದೇಶಗಳಲ್ಲಿ ಬೆಂಕಿ ಕಂಡ ಪ್ರದೇಶಗಳನ್ನು ಗುರುತಿಸಲು ವೀಕ್ಷಣಾ ಗೋಪುರಗಳನ್ನು ಕಟ್ಟಿಸಲಾಗಿದೆ.

5) ಅರಣ್ಯ ಪ್ರದೇಶಗಳಲ್ಲಿ ನಿಸ್ತಂತ್ತು ಉಪಕರಣಗಳನ್ನು ಅಲ್ಲಲ್ಲಿ ನಿರ್ಮಿಸಿ ಒಂದು ವೇಳೆ ಬೆಂಕಿ ಕಂಡಲ್ಲಿ ವಿಷಯವನ್ನು ತಿಳಿಸಲು ಮತ್ತು ಸಾರ್ವಜನಿಕರ ಸಹಕಾರ ತೆಗೆದುಕೊಳ್ಳಲು ಅನುಕೂಲಕರವಾಗುತ್ತದೆ.

6) ಕೆಲವು ಮುಖ್ಯವಾದ ಪ್ರದೇಶಗಳಲ್ಲಿ ಸಿಬ್ಬಂದಿ ವರ್ಗದವರಿಗೆ ವಾಹನಗಳನ್ನು ಒದಗಿಸಿ ಅವರುಗಳನ್ನು ಸ್ಥಳದಿಂದ ಸ್ಥಳಕ್ಕೆ ಹೋಗಿ ಬೆಂಕಿಯನ್ನು ನಂದಿಸಲು ಸಹಾಯವಾಗುತ್ತಿದೆ.

ಹಾಸನ ಜಿಲ್ಲೆಯಲ್ಲಿ ಅರಣ್ಯ ಬೆಳಿಸುವ ಬಗ್ಗೆ.

1401 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕಾಡು ಬೆಳಿಸಲಾಗಿದೆ? (ವಿವರ ನೀಡುವುದು)

ಆ) ಕಾಡು ಬೆಳೆದಿರುವ ಪ್ರದೇಶದ ವಿಸ್ತೀರ್ಣವೆಷ್ಟು?

ಇ) ಕರ್ನಾಟಕ ರಾಜ್ಯದ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು?

ಈ) ಭಾರತ ಮಟ್ಟದ ಸರಾಸರಿ ಕಾಡು ಪ್ರದೇಶಕ್ಕೆ ಕರ್ನಾಟಕ ರಾಜ್ಯದಲ್ಲಿ ಕಾಡು ಪ್ರದೇಶವನ್ನು ಹೆಚ್ಚಿಸಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಮಂತ್ರಿಗಳು):

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು 32,984 ಎಕರೆ ಪ್ರದೇಶದಲ್ಲಿ ವೃಕ್ಷ ತೋಪು(ಕಾಡು) ಬೆಳಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

1)	ನೀಲಗಿರಿ ನೆಡುತೋಪು	3467-98 ಹೆ.
2)	ಬಿದಿರು ನೆಡುತೋಪು	332-00 ಹೆ.
3)	ಸಾಗುವಾನಿ ನೆಡುತೋಪು	40-00 ಹೆ.
4)	ಮಿಶ್ರಿತ ಅಂದರೆ ಹುಣಸೆ, ಹೊಂಗೆ ನೀಲಗಿರಿ, ಹಲಸು, ಸಿಸ್ಸು, ಅಕೇಶಿಯ ಸುರಗಿ, ಸಿಲ್ವರ್, ಹಿಪ್ಪೆ ಇತ್ಯಾದಿ	9353-50 ಹೆ.
		13193-48 ಹೆ.
		ಅಥವಾ 32984 ಎಕರೆ.

ಆ) ಹಾಸನ ಜಿಲ್ಲೆಯಲ್ಲಿರುವ ಕಾಡು ಪ್ರದೇಶದ ವಿಸ್ತೀರ್ಣ 54100 ಹೆಕ್ಟೇರು ಅಥವಾ 133627 ಎಕರೆ.

ಇ) 38645.54 ಚದರ ಕಿಲೋ ಮೀಟರ್ ಅಥವಾ 3864554 ಹೆಕ್ಟೇರು (9545448 ಎಕರೆ)

ಈ) ವಿದೇಶಿ ನೆರವಿನ ಸಾಮಾಜಿಕ ಅರಣ್ಯ ಯೋಜನೆ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಜವಾಹರ ರೋಜ್‌ಗಾರ್ ಯೋಜನೆ, ಕೇಂದ್ರ ಪುರಸ್ಕೃತ ಮೇವು ಮತ್ತು ಉರುವಲು ಕಟ್ಟಿಗೆ ನೆಡುತೋಪು ಯೋಜನೆ, ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ, ಡಿಪಿಎಪಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ ಯೋಜನೆ ಬಂಜರು ಭೂಮಿ ಅಭಿವೃದ್ಧಿ (ಜಲಾನಯನ ಪ್ರದೇಶ) ಈ ಯೋಜನೆಗಳಡಿಯಲ್ಲಿ ಅರಣ್ಯ ವೃಕ್ಷ ತೋಪುಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಅಲ್ಲದೆ ರಾಜ್ಯದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಂಸ್ಥೆಗಳು ಸಂಘ ಸಂಸ್ಥೆಗಳು ಮತ್ತು ರೈತರುಗಳು ಇದ್ದಾರೆ. ಅವರ ಸ್ವಂತ ಜಮೀನಿನಲ್ಲಿ ಮರ ಬೆಳಿಸಲು ಸಸಿಗಳನ್ನು ಹಂಚುವುದನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ.